For more job news visit : www.kpscvaani.com

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿಯ ಗುರುತಿನ ಸಂಖ್ಯೆ (CIN): U31401KA2002SGC030437
ಕಂಪನಿ ಕಾರ್ಯಾಲಯ, "ವಿದ್ಯುತ್ ಭವನ", ಗೋಪನಕೊಪ್ಪ, ಹುಬ್ಬಳ್ಳಿ – 580 023
ದೂರವಾಣಿ ಸಂಖ್ಯೆ : 0836-2223867 hescom.karnataka.gov.in E-mail ID: gmadmhr.hescom@gmail.com

ಸಂಖ್ಯೆ: ಹುವಿಸಕಂನಿ/ಪುವ್ಯ(ಆ)/ಜೆ.ಎಲ್.ಎಮ್. ನೇಮಕಾತಿ/2024-25/ ಸಿವೈಎಸ್-2408 ದಿನಾಂಕ:06.06.2026

ಅಧಿಸೂಚನೆ-ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

ವಿಷಯ: ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ) ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಕವಿಪ್ರನಿನಿ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/ 2023-24(NKK), ದಿನಾಂಕ: 14.10.2024.
2. ಸಹನ ಶಕ್ತಿ ಪರೀಕ್ಷೆಯ ಅಧಿಸೂಚನೆ ಸಂಖ್ಯೆ: ಹುವಿಸಕಂನಿ/ ಪುವ್ಯ(ಆ)/ ಜೆ.ಎಲ್.ಎಮ್. ನೇಮಕಾತಿ/ 2024-25/ ಸಿವೈಎಸ್-1704, ದಿನಾಂಕ: 26.05.2025
3. ತಾತ್ಕಾಲಿಕ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಹುವಿಸಕಂನಿ/ಪುವ್ಯ(ಆ)/ಜೆ.ಎಲ್.ಎಮ್. ನೇಮಕಾತಿ/2024-25/ ಸಿವೈಎಸ್-1519 ದಿನಾಂಕ:15.05.2026

******

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24(NKK), ದಿನಾಂಕ:14.10.2024 ಕ್ಕೆ ಅನುಗುಣವಾಗಿ, ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ (ಎಸ್.ಎಸ್.ಎಲ್.ಸಿ/10ನೇ ತರಗತಿ) ಗಳಿಸಿರುವ ಅಂಕಗಳ ಜೇಷ್ಠತೆಯ ಆಧಾರದ ಮೇಲೆ, ದಿನಾಂಕ: 02.06.2025 ರಿಂದ 04.06.2025 ರವರೆಗೆ ಅಧಿಸೂಚಿತ ಹುದ್ದೆಗಳ 1:5 ರ ಅನುಪಾತದಲ್ಲಿ ನಡೆಸಲಾದ ಸಹನ ಶಕ್ತಿ ಪರೀಕ್ಷೆಯಲ್ಲಿ ಕಿರಿಯ ಪವರ್‌ಮ್ಯಾನ್(ಎನ್.ಕೆ.ಕೆ) ಹುದ್ದೆಗಳಿಗೆ ಅರ್ಹರಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-off) ಅಂಕಗಳೊಂದಿಗೆ ದಿನಾಂಕ:15.05.2026 ರಂದು ಹೆಸ್ಕಾಂನ ಅಂತರ್ಜಾಲ https://hescom.karnataka.gov.in ದಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಆಯ್ಕೆಪಟ್ಟಿಗೆ ಸಂಬಂಧಿಸಿದಂತೆ ನಿಗದಿತ ಅವಧಿಯೊಳಗೆ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ನೇಮಕಾತಿ ಅಧಿಸೂಚನೆಯ ಷರತ್ತುಗಳು, ಅಭ್ಯರ್ಥಿಗಳ ಮೆರಿಟ್, ಮೀಸಲಾತಿ, ರೋಸ್ಟರ್ ಮ್ಯಾಟ್ರಿಕ್ಸ್ ಹಾಗೂ ಸಂಬಂಧಿತ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಲಾಯಿತು. ಪರಿಶೀಲನೆಯ ನಂತರ, ಮೆರಿಟ್ ಆಧಾರದ ಮೇಲೆ ಅಂಗೀಕರಿಸಬಹುದಾದ ಯಾವುದೇ ಆಕ್ಷೇಪಣೆ ಕಂಡುಬಂದಿರುವುದಿಲ್ಲ.

ಆದ್ದರಿಂದ, ನೇಮಕಾತಿ ಅಧಿಸೂಚನೆಯ ಷರತ್ತುಗಳು, ಅಭ್ಯರ್ಥಿಗಳ ಮೆರಿಟ್, ಮೀಸಲಾತಿ ಹಾಗೂ ರೋಸ್ಟರ್ ಮ್ಯಾಟ್ರಿಕ್ಸ್ ಆಧಾರದ ಮೇಲೆ ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ) ಹುದ್ದೆಗಳ **ಅಂತಿಮ ಆಯ್ಕೆಪಟ್ಟಿಯನ್ನು (ಆಯ್ಕೆ ಪಟ್ಟಿ- ಅನುಬಂಧ-1 ಮತ್ತು ಕಟ್ ಆಫ್ ಪಟ್ಟಿ – ಅನುಬಂಧ-2) ಈ ಮೂಲಕ** ಹೆಸ್ಕಾಂನ ಅಂತರ್ಜಾಲ https://hescom.karnataka.gov.in ಪ್ರಕಟಿಸಲಾಗಿದೆ.

ಈ ಅಂತಿಮ ಆಯ್ಕೆ ಪಟ್ಟಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವ **"ರಿಟ್ ಅರ್ಜಿ ಸಂಖ್ಯೆ:200448/2025 ಹಾಗೂ ಸಂಬಂಧಿಸಿದ ಇನ್ನೀತರೆ ರಿಟ್ ಅರ್ಜಿ"** ರಲ್ಲಿನ ಅಂತಿಮ ತೀರ್ಪಿಗೊಳಪಟ್ಟು ಪ್ರಕಟಿಸಲಾಗಿದೆ.

ಕಿರಿಯ ಪವರ್‌ಮ್ಯಾನ್(ಎನ್.ಕೆ.ಕೆ) ಸೂಚಿತ ಹುದ್ದೆಗಳ ಪೈಕಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿಯಾಗದೇ ಉಳಿದಿರುವ ಹುದ್ದೆಗಳನ್ನು ನಿಯಮಾನುಸಾರ ಬ್ಯಾಕ್‌ಲಾಗ್ (Backlog) ಹುದ್ದೆಗಳೆಂದು ಪರಿಗಣಿಸಲಾಗಿದ್ದು, ವಿವರಗಳನ್ನು ಅನುಬಂಧ-3 ರಲ್ಲಿ ತೋರಿಸಲಾಗಿದೆ.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ., ಹುಬ್ಬಳ್ಳಿ ಇವರಿಂದ ಅನುಮೋದಿಸಲ್ಪಟ್ಟಿದೆ."

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ.)
ಹುವಿಸಕಂನಿ., ಹುಬ್ಬಳ್ಳಿ